# ಮುನಿಸು ಬಂದಾಗಲೆಲ್ಲ ನೆನಪಾಗುವ ಹೃದಯಗೀತೆ

ಇನ್ನೇನು ಐವತ್ತರ ಹೊಸಿಲಲ್ಲಿ ಕಾಲಿಡುತ್ತಿರುವ ದಾಂಪತ್ಯ. ಅಂದೂ ಇತ್ತು, ಈಗಲೂ ಸಣ್ಣ ಕಾರಣಕ್ಕೆ ಮುನಿಸು, ಜಗಳ, ಯಾವುದೋ ಕಾಲದಲ್ಲಿ ತನಗಾದ ಅನ್ಯಾಯದ ಪರಾಮರ್ಶೆ. ಎಲ್ಲ ಮುಗಿದ ಮೇಲೆ ಮೌನ. ಕಾಫಿ ತಂದಿಡುವಾಗಲೂ ಮಾತಿಲ್ಲ. ಊಟದ ತಟ್ಟೆ ಸದ್ದು ಬರುವಂತೆ ಎತ್ತಿಟ್ಟಾಗಲೇ ಊಟ ತಯಾರಾಗಿದೆ ಎಂಬುದು ಅರಿವಾಗಬೇಕು. ರಾತ್ರೆಯಾಗಿ ಮಲಗುವ ತನಕ ಇರಬೇಕಾದ ಮುನಿಸು ಇನ್ನೂ ಮುಂದುವರೆಯುತ್ತದೆ. ಹಾಗೆಯೇ ಕುಳಿತುಕೊಂಡು ಬಿಕ್ಕಳಿಕೆ. ಈ ಅಳುವಿನ ಸಣ್ಣ ದನಿಗೇ ಕರಗುತ್ತದೆ ಮನಸ್ಸು. ಮದುವೆಯಾಗಿ ಬಂದ ಹರೆಯದಲ್ಲಿ ಅನುಭವಿಸಿದ ಊಟದ ಕೊರತೆ. ತನ್ನ ಪಾಲಿನ ಊಟವನ್ನೆಲ್ಲ ಗಂಡನಿಗೆ ಬಡಿಸಿ ಖಾಲಿ ನೀರು ಕುಡಿದರೂ ಕೊರತೆಯ ನೋವು ಕಾಡಲಿಲ್ಲ. ಬೆಟ್ಟಕ್ಕೆ ಹೋಗಿ ತುಂಬು ಗರ್ಭಿಣಿ ಹಟ್ಟಿಗೆ ತರಗೆಲೆ ಹೊತ್ತು ತಂದ ದಿನಗಳಲ್ಲೂ ಮುನಿಸಿಕೊಳ್ಳಲಿಲ್ಲ. ಈಗ ಎಲ್ಲ ಅನುಕೂಲವೂ ಇರುವಾಗ ವೃಥಾ ಮುನಿಸು.

ಸಣ್ಣದಾಗಿ ಹಾಡುತ್ತೇನೆ. ಸುಬ್ರಾಯ ಚೊಕ್ಕಾಡಿಯವರ ಜೀವದನಿಯ ಹಾಡು, 'ಮುನಿಸು ತರವೇ ಮುಗುದೆ...' ಪುತ್ತೂರು ನರಸಿಂಹ ನಾಯಕರ ಕಂಠ ಹಾಡಿನ ಭಾವಕ್ಕೆ ಜೀವ ತುಂಬಿದೆ. ಕೇಳುತ್ತೇನೆ, ಹಿತವಾಗಿ ನಗಲೂ ಬಾರದೆ? ಬಾನಿನಲ್ಲಿ ಮಿಂಚರಳಿದಾಗ ತಾರೆಗಳು ಮೈಯ ಬಳಸದಿದ್ದರೂ ಇವಳಂತೂ ಆ ದನಿಗೇ ಕರಗಿ ಆಲಿಂಗಿಸಿಕೊಳ್ಳುತ್ತಾಳೆ. ಎಷ್ಟೊಂದು ಕಾಲದಿಂದ ಮುದಗೊಳಿಸಿ ಸುಖೀ ಜೀವನದ ಕನಸಿಗೆ ಸಾಥಿಯಾದ ಮನದನ್ನೆ ಮುನಿಸು ಮರೆತು ಬಳಿ ಸಾರುತ್ತಾಳೆ. ಅವಳಿಗೂ ಅಷ್ಟೇ ಈ ಮೃದು ಮಧುರ ಸಾಲುಗಳನ್ನು ಕೇಳಿಸಿಕೊಳ್ಳುವುದು ಆಪ್ಯಾಯಮಾನ. ಅದೆಷ್ಟೋ ಸಂಸಾರಗಳ ಮೈಮನವನ್ನು ವಾಗರ್ಥದಂತೆ ಸೇರಿಸಿ ಜೀವನವನ್ನು ಪಾವನಗೊಳಿಸಿದೆಯೋ ಈ ಹಾಡು ಎಂಬ ಕೃತಜ್ಞತಾ ಭಾವ ಹೊರಹೊಮ್ಮುತ್ತದೆ.

—ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

# ಮನಸ್ಸಿಗೆ ಉಲ್ಲಾಸದ ತಂಗಾಳಿ

ಬಾಲ್ಯದಲ್ಲಿ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದ ತಂತಿವಾದ್ಯದ ಆಲಾಪನೆ ಮನೆಯ ಮಕ್ಕಳನ್ನೆಲ್ಲಾ ಬಡಿದೆಬ್ಬಿಸುವುದು. ಹಾಲಿನ ತಂಬಿಗೆ ಹಿಡಿದು ಒಳ ಬರುವ ಅಮ್ಮ ಅದ್ಯಾವುದೋ ಹಾಡನ್ನು ಗುನುಗುತ್ತಿದ್ದಾಳೆ! ಕಿವಿಗೊಟ್ಟು ಕೇಳಿದರೆ 'ಜನನಿ ಶಿವಗಾಮಿನಿ ಜಯಶುಭಕಾರಿಣಿ ವಿಜಯರೂಪಿಣಿ ಜನನಿ...' ಇದು ಬಾಲ್ಯದಲ್ಲಿ ನಾನು ಕೇಳಿದ್ದ ಮೊದಲ ಹಾಡಿನ ನೆನಪು.

ಸವಿಯಾದ ಸಕ್ಕರೆಯ ನಿದ್ದೆ ಮಾಡಲಿ ಎಂದು ಮಕ್ಕಳಿಗೆ 'ಧರಣಿಗೆ ಗಿರಿಭಾರವೇ, ಗಿರಿಗೆ ಮರವು ಭಾರವೇ' ಎಂದು ಜೋಗುಳ ಹಾಡಿ ಮಲಗಿಸುತ್ತಿದ್ದ ಅಮ್ಮನ ಸಿಹಿಯಾದ ಕಂಠಕ್ಕೆ, ಮಾಧುರ್ಯಭರಿತ ಚಲನಚಿತ್ರಗೀತೆಗಳಿಗೆ ಮನಸೋಲುತ್ತಿತ್ತು. ಕಾಲಕ್ರಮೇಣ ಮೆಚ್ಚಿನ ಚಲನಚಿತ್ರ ಗೀತೆಗಳಿಗೆ ಅದೆಷ್ಟು ಕಾಯುತ್ತಿದ್ದೆವು! ಕಂಠಪಾಠ ಮಾಡಿದ ಹಾಡುಗಳನ್ನೆಲ್ಲ ನೆನಪಿನ ಕ್ಯಾಸೆಟ್ಟಿನಲ್ಲಿ ಶೇಖರಿಸಿಕೊಂಡು ಮೆಲುಕು ಹಾಕುವಾಗ ಅದ್ಯಾವುದೋ ಬಿಡುಗಡೆಯ ಭಾವ ಮನಸ್ಸಿನ ತುಂಬಾ ತುಂಬಿಕೊಂಡು ಹಗುರವಾಗಿಬಿಡುತ್ತಿದ್ದೆ.

8ನೇ ತರಗತಿಯಲ್ಲಿದ್ದಾಗ ಕನ್ನಡದ ಮರಿಯಪ್ಪ ಮಾಸ್ತರು ತರಗತಿಯಲ್ಲೊಮ್ಮೆ ಸುಶ್ರಾವ್ಯವಾಗಿ ಹಾಡಿದ 'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ' ನಾನು ಕೇಳಿದ ಮೊದಲ ಭಾವಗೀತೆ. ಹೃದಯ ತುಂಬಿ ಸುಖದ ಭಾವನೆಗಳ ಸೂರೆಗೊಳ್ಳುವ ಕನ್ನಡದ ಭಾವಗೀತೆಗಳು ನನಗೀಗಲೂ ಅಚ್ಚುಮೆಚ್ಚು.

ನಾನು ಪಾಠ ಮಾಡುವಾಗ ಜಾನಪದ ಗೀತೆಗಳನ್ನು ಹಾಡಿಯೇ ವಿದ್ಯಾರ್ಥಿಗಳ ಮನಸ್ಸನ್ನು ನನ್ನ ಪಾಠದ ಕಡೆ ಸೆಳೆದುಕೊಂಡು ಬಿಡುತ್ತಿದ್ದೆ. ಹಾಡಿನ ಭಾವಕ್ಕೆ ರಾಗಕ್ಕೆ ಅದು ಅಭಿವ್ಯಕ್ತಿಸುವ ಅನೂಹ್ಯಾನುಭವದ ರಸಾವೇಶಕ್ಕೆ ಎಂದಿಗೂ ಕೊರತೆ ಇಲ್ಲ. ಬೇಂದ್ರೆಯವರ ಮಾತಿನಂತೆ 'ಭೃಂಗದ ಬೆನ್ನೇರಿ ಬರುವ ಕಲ್ಪನಾ ವಿಲಾಸ' ಕೇಳುವಾಗಲೆಲ್ಲಾ ಮಿಂಚಿ ಮಾಯವಾಗುವ ಮಂದಹಾಸ. ಅದು ಚಿತ್ರಗೀತೆಯಾಗಲಿ, ಭಾವಗೀತೆಯಾಗಲಿ, ಶಾಸ್ತ್ರೀಯ ಸಂಗೀತವೇ ಆಗಲಿ, ಹಾಡೆಂದರೆ ನನಗದು ಸದಾ ಉಲ್ಲಾಸ ನೀಡೋ ತಂಗಾಳಿ. ದುಗುಡದ ಭಾವಗಳನ್ನೆಲ್ಲಾ ದೂರ ತಳ್ಳುವ ಜೀವಚೈತನ್ಯ.

—ಸುಜಾತ ಕುಚ್ಚಣ್ಣ

